# <u>ಮಂಗಳೂರು ವಿಶ್ವವಿದ್ಯಾನಿಲಯ</u>

ದಿನಾಂಕ 14.07.2023ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2023ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡವಳಿಗಳು.

**ಉಪಸ್ಥಿತರು:**

| **ಕ್ರ.ಸಂ.** | | | **ಸಹಿ** |
|---|---|---|---|
| 1. | ಪ್ರೊ. ಜಯರಾಜ್ ಅಮೀನ್<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ರಾಮೇಗೌಡ ಎಂ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಡಾ. ಎಸ್. ಬಿ. ಎಂ. ಪ್ರಸನ್ನ | ಸದಸ್ಯರು | |
| 4. | ಡಾ. ಕೆ. ಸಿ. ಮಹದೇಶ | ಸದಸ್ಯರು | |
| 5. | ಪ್ರೊ. ಜಯರಾಜ್ ಅಮೀನ್<br>ಡೀನರು, ಕಲಾ ನಿಕಾಯ | ಸದಸ್ಯರು | |
| 6. | ಶ್ರೀ ಕೃಷ್ಣಪ್ರಸಾದ್ ಕೆ. ಎನ್. | ಸದಸ್ಯರು | |
| 7. | ಡಾ. ರಾಜೇಂದ್ರ ಎಸ್. ನಾಯಕ್ | ಸದಸ್ಯರು | |
| 8. | ಶ್ರೀಮತಿ ಸಮೀರ ಕೆ. ಎ. | ಸದಸ್ಯರು | |
| 9. | ಶ್ರೀ ಎಚ್. ತ್ರಿಲೋಕನಾಥ್ | ಸದಸ್ಯರು | |
| 10. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | |
| 11. | ಪ್ರೊ. ರಾಜುಕೃಷ್ಣ ಚಲಣ್ಣವರ್<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 12. | ಪ್ರೊ. ವೈ. ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ<br>ಆಹ್ವಾನಿತರು | |
| 13. | ಪ್ರೊ. ಕಿಶೋರ್ ಕುಮಾರ್ ಸಿ. ಕೆ.<br>ಕುಲಸಚಿವರು (ಆಡಳಿತ) | ಸದಸ್ಯ<br>ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

- **ಸ್ವಾಗತ:**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1) (ಇ) ಪ್ರಕಾರ ಘನತೆವೆತ್ತ ರಾಜ್ಯಪಾಲರ ಪತ್ರ ಸಂಖ್ಯೆ GS 05 MLM 2023 ದಿನಾಂಕ 16.06.2023 ಮತ್ತು 01.07.2023ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಘನತೆವೆತ್ತ ಕುಲಾಧಿಪತಿಗಳಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ಸದಸ್ಯರುಗಳನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.
    1. ಡಾ. ಎಸ್. ಬಿ. ಎಂ. ಪ್ರಸನ್ನ, #371, ಕನ್ನಿಕಾ ಲೇಔಟ್, ರಾಮಸಂದ್ರ ಗ್ರಾಮ, ಸೂಳಿಕೆರೆ ಅಂಚೆ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು- 560060
    2. ಡಾ. ಕೆ.ಸಿ. ಮಹದೇಶ, ಕಲ್ಕ ಹಳ್ಳಿ ಗ್ರಾಮ, ಕುಪ್ಪರವಳ್ಳಿ ಅಂಚೆ, ಮೈಸೂರು ತಾಲೂಕು ಮತ್ತು ಜಿಲ್ಲೆ - 571129

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28 (1)(ಬಿ) ಪ್ರಕಾರ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಗಳಿಗೆ ಹಾಜರಾಗಲು ಆಗಮಿಸಿರುವ ಡಾ. ರಾಮೇಗೌಡ ಎಂ., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

- **ಕೃತಜ್ಞತೆ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1) (ಇ) ಪ್ರಕಾರ ಘನತೆವೆತ್ತ ಕುಲಾಧಿಪತಿಗಳಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿದ್ದ ಈ ಕೆಳಗಿನ ಸದಸ್ಯರುಗಳ ಸದಸ್ಯತ್ವದ ಅವಧಿಯು ಮುಕ್ತಾಯಗೊಂಡಿರುವುದರಿಂದ ಸದರಿಯವರುಗಳನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.
    1. ಪ್ರೊ. ಕರುಣಾಕರ್ ಎ.ಕೋಟೆಗಾರ್, ಶ್ರೀ ಅಣ್ಣಪ್ಪ, ಆರ್.ಪಿ. ನಗರ, ಇಂದ್ರಾಳಿ ದೇವಸ್ಥಾನದ ಹತ್ತಿರ, ಉಡುಪಿ ಜಿಲ್ಲೆ
    2. ಶ್ರೀ ರವಿಚಂದ್ರಪಿ.ಎಂ, ನಂ. 103, ಪೂಜನ್, ಎನ್‌ಕ್ಲೇವ್, 6ನೇ ಅಡ್ಡರಸ್ತೆ, ಗಾಂಧಿನಗರ, ಮಣ್ಣಗುಡ್ಡೆ, ಮಂಗಳೂರು

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28 (1)(ಬಿ) ಪ್ರಕಾರ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ ಜಂಟಿ ನಿರ್ದೇಶಕರ ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಗಳಿಗೆ ಹಾಜರಾಗುತ್ತಿದ್ದ ಡಾ. ವಿಷ್ಣುಮೂರ್ತಿ ಕೆ. ಎ., ಇವರನ್ನು ಮಾನ್ಯ ಆಯುಕ್ತರ ಪತ್ರದನ್ವಯ ಜಂಟಿ ನಿರ್ದೇಶಕರ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.

ಇವರುಗಳು ತಮ್ಮ ಅಧಿಕಾರದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## I. ನಡವಳಿಗಳ ದೃಢೀಕರಣ

1. ದಿನಾಂಕ 14.06.2023ರಂದು ನಡೆದ ಸಿಂಡಿಕೇಟಿನ 2023ನೇ ಸಾಲಿನ ತೃತೀಯ ವಿಶೇಷ ಸಭೆಯ ನಡವಳಿಯ ದೃಢೀಕರಣ.

   - **ದೃಢೀಕರಿಸಲಾಯಿತು.** –

## II. ಅನುಸರಣಾ ವರದಿಯ ಅನುಮೋದನೆ

1. ಘಟಿಕೋತ್ಸವದ ಪ್ರಯುಕ್ತ ದಿನಾಂಕ 14.03.2023ರಂದು ನಡೆದ ಸಿಂಡಿಕೇಟಿನ 2023ನೇ ಸಾಲಿನ ಪ್ರಥಮ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   - **ಅನುಮೋದಿಸಲಾಯಿತು**. -

2. ದಿನಾಂಕ 20.03.2023ರಂದು ನಡೆದ ಸಿಂಡಿಕೇಟಿನ 2023ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ

   - **ಅನುಮೋದಿಸಲಾಯಿತು**. -

**3.** ದಿನಾಂಕ 25.05.2023ರಂದು ನಡೆದ ಸಿಂಡಿಕೇಟಿನ 2023ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ

   - **ಅನುಮೋದಿಸಲಾಯಿತು**. -

**III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

**ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.4:1(2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸ್ತುತ ಇರುವ ಲಾಂಛನದಲ್ಲಿ ಬದಲಾವಣೆ / ತಿದ್ದುಪಡಿ ಮಾಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು :ಸಾ.ಸ.4:2(2023)**

ವಿಷಯ: ರಾಜ್ಯಗ್ರಂಥಾಲಯ ಪ್ರಾಧಿಕಾರಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನಿಂದ ಓರ್ವ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸದಸ್ಯರಾಗಿರುವ ಡಾ. ಎಸ್. ಬಿ. ಎಂ. ಪ್ರಸನ್ನ ಇವರನ್ನು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ: ಸಾ.ಸ.4:3(2023)**

ವಿಷಯ: "Late Mrs. Indira Anantharangachar Gold Medal" to Top Scorer in Post Graduate Course in Master of Education (M.Ed.)" – ಚಿನ್ನದ ಪದಕ ಪ್ರದಾನ ಮಾಡುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ: ಸಾ.ಸ.4:4(2023)**

ವಿಷಯ: "15th Graduating Batch Commemoration Gold Medal" to Top Scorer in Post Graduate Course in Biotechnology Programme – ಚಿನ್ನದ ಪದಕ ಪ್ರದಾನ ಮಾಡುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ: ಸಾ.ಸ.4:5(2023)**

ವಿಷಯ: "Late Mrs. Mallipattana Subbalakshamma Ramaswamy Gold Medal" to Top Scorer in B.Ed. degree Examination" – ಚಿನ್ನದ ಪದಕ ಪ್ರದಾನ ಮಾಡುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ: ಸಾ.ಸ.4:6(2023)**

ವಿಷಯ: Supply of Components for the Tube Furnace System to CARER Centre Mangalore University

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ : ಸಾ.ಸ.4:7(2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ಖಾಯಂ ಸಿಬ್ಬಂದಿಗಳಿಗೆ ಒದಗಿಸಿದಂತೆ ವಿವಿಧ ತಾತ್ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ / ಬೋಧಕೇತರ ಸಿಬ್ಬಂದಿಗಳಿಗೆ ಔಷಧಿ / ಪ್ರಯೋಗಾಲಯ ಸೇವೆಯನ್ನು ಉಚಿತವಾಗಿ ಒದಗಿಸಲು ಅನುಮತಿ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ :ಸಾ.ಸ.4:8(2023)**

ವಿಷಯ: ಸೆಪ್ಟೆಂಬರ್/ಅಕ್ಟೋಬರ್ 2022ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು - ದಂಡನೆಯನ್ನು ದೃಢಪಡಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ :ಸಾ.ಸ.4:9(2023)**

ವಿಷಯ: ಸೆಪ್ಟೆಂಬರ್/ಅಕ್ಟೋಬರ್ 2022ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ದೂರ ಶಿಕ್ಷಣದ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಹಣಕಾಸು :ಸಾ.ಸ.4:10(2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ :ಸಾ.ಸ.4:11 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ಕಟ್ಟಡಕ್ಕೆ ಪರವಾನಿಗೆ ಅವಧಿ ನಿಗದಿಪಡಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಹಿಂದೆ ನಿಗದಿಪಡಿಸಿರುವ ಬಾಡಿಗೆ ದರದಲ್ಲಿ ಪ್ರತಿ ವರ್ಷಕ್ಕೆ ಶೇಕಡಾ 10ರಷ್ಟು ಬಾಡಿಗೆಯನ್ನು ಹೆಚ್ಚಿಸಿಕೊಂಡು ಮುಂದಿನ ಐದು ವರ್ಷಗಳ ಅವಧಿಗೆ ಪರವಾನಗಿಯನ್ನು ವಿಸ್ತರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ :ಸಾ.ಸ.4:12 (2023)**

ವಿಷಯ: ಘಟಕ ಕಾಲೇಜುಗಳ ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯವೈಖರಿಯ ಪರಿನಿಯಮ ರಚನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ :ಸಾ.ಸ.4:13 (2023)**

ವಿಷಯ: AMC for Radon Calibration Chamber to CARER, Mangalore University.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ :ಸಾ.ಸ.4:14 (2023)**

ವಿಷಯ: Supply of Universal Testing Machine under VGST - CISEE Research Project to Physics Department, Mangalore University

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ :ಸಾ.ಸ.4:15 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಛೇರಿಗಳಿಗೆ ಇಂಟರ್‌ನೆಟ್ ಅಳವಡಿಸಲು ಅಗತ್ಯವಿರುವ UTP/OFC Net working item ಗಳನ್ನು ಒಂದು ವರ್ಷದ ಅವಧಿಗೆ ಧಾರಣಾಗುತ್ತಿಗೆ ದರದಲ್ಲಿ ಖರೀದಿಸುವ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ :ಸಾ.ಸ.4:16 (2023)**

ವಿಷಯ: ವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರದ ಪ್ರಯೋಗಾಲಯಕ್ಕೆ ರಕ್ತ ಪರೀಕ್ಷೆಯ ಉಪಕರಣಗಳನ್ನು ಖರೀದಿಸುವ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ :ಸಾ.ಸ.4:17 (2023)**

ವಿಷಯ: CARRT ಕೇಂದ್ರದಲ್ಲಿರುವ Premium Upright Freezer (-86$^{\circ}$C) ದುರಸ್ತಿಗೊಳಿಸುವ ಇಂಡೆಂಟ್ ಮಂಜೂರಾತಿ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ :ಸಾ.ಸ.4:18 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಪ್ರಸನ್ನ ಬಿ.ಕೆ. ಇವರಿಗೆ ದಾವಣಗೆರೆ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ಖಾಲಿಯಿರುವ ಸಹಾಯಕ ದೈಹಿಕಶಿಕ್ಷಣ ನಿರ್ದೇಶಕರ ಹುದ್ದೆಗೆ ವರ್ಗಾಯಿಸುವ ಕುರಿತು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ನಿರ್ಣಯ: ಹುದ್ದೆ ರಹಿತವಾಗಿ ನಿರಾಕ್ಷೇಪಣಾ ಪತ್ರ ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ :ಸಾ.ಸ.4:19 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕೈಗಾರಿಕಾ ರಸಾಯನಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ರಮೇಶ್ ಸಾಬು ಗಣಿ ಇವರಿಗೆ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿನ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಖಾಲಿಯಿರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ವರ್ಗಾಯಿಸುವ ಕುರಿತು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ನಿರ್ಣಯ: ಹುದ್ದೆ ರಹಿತವಾಗಿ ನಿರಾಕ್ಷೇಪಣಾ ಪತ್ರ ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ :ಸಾ.ಸ.4:20(2023)**

ವಿಷಯ: ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ / ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕರಿಗೆ ಹಿರಿಯ ಪ್ರಾಧ್ಯಾಪಕರಾಗಿ ಪದೋನ್ನತಿ - ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಆಯ್ಕೆ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

ಮುಂದುವರಿದು, ಕ್ರಮ ಸಂಖ್ಯೆ 17ರಲ್ಲಿ ನಮೂದಿಸಿರುವ ಡಾ. ಕರುಣಾಕರ್ ಎನ್. ಇವರಿಗೆ USIC ವಿಷಯದಲ್ಲಿ ಹಿರಿಯ ಪ್ರಾಧ್ಯಾಪಕರಾಗಿ ಮುಂಭಡ್ತಿ ನೀಡುವ ಪ್ರಸ್ತಾವನೆಗೆ USIC ಗೆ ಪ್ರತ್ಯೇಕ ವಿಷಯ ತಜ್ಞರನ್ನೊಳಗೊಂಡ ಸಮಿತಿಯನ್ನು ಹೊಸದಾಗಿ ರಚಿಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಸಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ :ಸಾ.ಸ.4:21 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು / ಕಛೇರಿಗಳಿಗೆ ಅಗತ್ಯವಿರುವ ಗಣಕಯಂತ್ರ ಮತ್ತು ಪ್ರಿಂಟರ್‌ಗಳನ್ನು ಹಾಗೂ ಬೋಧಕ ಸಿಬ್ಬಂದಿಗಳಿಗೆ ಲ್ಯಾಪ್‌ಟಾಪ್ ಖರೀದಿಸುವ ಬಗ್ಗೆ.

ನಿರ್ಣಯ: ಬ್ರಾಂಡೆಂಡ್ ಕಂಪನಿಗಳ ಗಣಕಯಂತ್ರ ಹಾಗೂ ಪ್ರಿಂಟರ್ ಮತ್ತು ಲ್ಯಾಪ್‌ಟಾಪ್‌ಗಳನ್ನು ಒದಗಿಸುವಂತೆ ಸರಬರಾಜು ಆದೇಶವನ್ನು ನೀಡುವ ಷರತ್ತಿನೊಂದಿಗೆ ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ :ಸಾ.ಸ.4:22(2023)**

ವಿಷಯ: ಪಿಹೆಚ್.ಡಿ. ಪದವಿಪ್ರದಾನ ಮಾಡಿದ ಬಗ್ಗೆ.

ನಿರ್ಣಯ: ಅವಗಾಹನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ :ಸಾ.ಸ.4:23(2023)**

ವಿಷಯ: CARER ಕೇಂದ್ರದ ಪ್ರಯೋಗಾಲಯದಲ್ಲಿರುವ Quantulus-1220 Liquid Scintillation Counting (LSC) ಉಪಕರಣಕ್ಕೆಅಗತ್ಯವಿರುವ QT Cooling System ನ ಖರೀದಿಯ ಮಂಜೂರಾತಿ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು :ಸಾ.ಸ.4:24(2023)**

ವಿಷಯ: ಪದವಿ ಮತ್ತು ಸ್ನಾತಕೋತ್ತರ ಫುಡ್ ಸೈನ್ಸ್ ಮತ್ತು ಟೆಕ್ನಾಲಜಿ (Food Science and Technology) ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

ನಿರ್ಣಯ: ಪದವಿ ಮತ್ತು ಸ್ನಾತಕೋತ್ತರ ಫುಡ್ ಸೈನ್ಸ್ ಮತ್ತು ಟೆಕ್ನಾಲಜಿ (Food Science and Technology) ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ :ಸಾ.ಸ.4:25(2023)**

ವಿಷಯ: Supply of Split Air Conditioners to Microtron Centre.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ :ಸಾ.ಸ.4:26(2023)**

ವಿಷಯ: CARER ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ - LSC ಉಪಕರಣದ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.4:27(2023)

ವಿಷಯ: ಮೈಕ್ರೋಟ್ರಾನ್ ಕೇಂದ್ರಕ್ಕೆ AC Package Unit ನ್ನುಸರಬರಾಜು ಮಾಡುವ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.4:28(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ವಿಜ್ಞಾನ ಉಪಕರಣ ಕೇಂದ್ರದ Atomic Absorption Spectrophotometer (AAS) ದುರಸ್ಥಿ ಪಡಿಸಲು ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ :ಸಾ.ಸ.4:29(2023)

ವಿಷಯ: 2023ನೇ ಸಾಲಿನ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಚರ್ಚಿಸಲಾಗಿ ಅಂತಿಮ ನಿರ್ಣಯವನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ :ಸಾ.ಸ.4:30(2023)

ವಿಷಯ: 2023ನೇ ಸಾಲಿನ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಪರೀಕ್ಷಾ ನಮೂನೆ / ಲಕೋಟೆ/ ಲೇಖನ ಸಾಮಾಗ್ರಿಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ :ಸಾ.ಸ.4:31(2023)

ವಿಷಯ: ಬಟ್ಟೆ ಚೀಲ ಹೊಲಿಯಲು ಬೇಕಾದ ಕೋರಾ ಬಟ್ಟೆ ಖರೀದಿ ಬಗ್ಗೆ

ನಿರ್ಣಯ: ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.4:32(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಆಡಳಿತ ಸೌಧದ ಕ್ಯಾಂಟೀನ್‌ನ್ನು ಮತ್ತು ಕಾವೇರಿ ಅತಿಥಿ ಗೃಹವನ್ನು ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ವಿವಿದೋದ್ಧೇಶ ಸಹಕಾರ ಸಂಘದ ವತಿಯಿಂದ ನಡೆಸುವ ಪ್ರಸ್ತಾವನೆಯ ಬಗ್ಗೆ.

ನಿರ್ಣಯ: ಸಹಕಾರ ಸಂಘದ ಮೂಲಕ ಕ್ಯಾಂಟೀನು ಮತ್ತು ಅತಿಥಿಗೃಹಗಳನ್ನು ನಡೆಸುತ್ತಿರುವುದರಿಂದ ಕನಿಷ್ಠ ಬಾಡಿಗೆ ದರವನ್ನು ನಿಗದಿಪಡಿಸಬಹುದೆಂಬುದಾಗಿ ನಿರ್ಣಯಿಸಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.4:33(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Students Grievances Redressal ಗೆ OMBUDSPERSON ನ್ನುನೇಮಿಸುವ ಬಗ್ಗೆ.

ನಿರ್ಣಯ: ಸೂಕ್ತ OMBUDSPERSON ನ್ನುನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.4:34(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Nuclear Power Corporation of India Ltd. (NPCIL), Govt. of India, Kaiga ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.4:35(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Ross Lifescience Limited, Pune ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.4:36(2023)

ವಿಷಯ: ಮಾನವ ಪ್ರಜ್ಞೆ ಮತ್ತು ಯೋಗವಿಜ್ಞಾನ ವಿಭಾಗ - Wonkwang Digital University (WDU), Korea ಇವರೊಂದಿಗೆ ಒಡಂಬಡಿಕೆ ಅವಧಿಯನ್ನು ವಿಸ್ತರಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ :ಸಾ.ಸ.4:37(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಅರ್ಹ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವುದಕ್ಕೆ ಸಂಬಂಧಿಸಿದಂತೆ ಸ್ಥಾಯಿ ಸಮಿತಿ ರಚನೆ ಬಗ್ಗೆ.

ನಿರ್ಣಯ: ನಿಯಮಾನುಸಾರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು : ಸಾ.ಸ.4:38(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗಕ್ಕೆ ಪ್ರೊ. ಪಿ. ಎಲ್. ಧರ್ಮ ಇವರನ್ನು ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು :ಸಾ.ಸ.4:39(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ಯಾತಕೋತ್ತರ ಸಾಗರಭೂವಿಜ್ಞಾನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಾಗರಭೂವಿಜ್ಞಾನ ವಿಭಾಗಕ್ಕೆ ದಿನಾಂಕ 01.08.2023ರಿಂದ ಅನ್ವಯವಾಗುವಂತೆ ಪ್ರೊ. ಬಿ. ಆರ್. ಮಂಜುನಾಥ ಇವರನ್ನು ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು :ಸಾ.ಸ.4:40(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗವನ್ನು ಹೊರತುಪಡಿಸಿ, ಈ ಕೆಳಗಿನ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಸೂಚಿಸಿರುವ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಲಾಯಿತು.

| ಕ್ರ. ಸಂ. | ಸ್ನಾತಕೋತ್ತರ ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ಕನ್ನಡ | ವಿಭಾಗದಲ್ಲಿ ಪ್ರಸ್ತುತ ಅಧ್ಯಕ್ಷರಾಗಿರುವ ಪ್ರೊ. ಸೋಮಣ್ಣ ಇವರನ್ನೇ ಮುಂದಿನ ಆದೇಶದವರೆಗೆ ವಿಭಾಗದ ಪ್ರಭಾರ ಅಧ್ಯಕ್ಷರನ್ನಾಗಿ ಮುಂದುವರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |
| 2. | ಅನ್ವಯಿಕ ಸಸ್ಯಶಾಸ್ತ್ರ | ಡಾ. ರಮೇಶ ಎ. |
| 3. | ವಸ್ತು ವಿಜ್ಞಾನ | ಪ್ರೊ. ಮಂಜುನಾಥ ಪಟ್ಟಾಭಿ (ದಿನಾಂಕ 30.09.2023ರವರೆಗೆ (ವಯೋನಿವೃತ್ತಿ ದಿನಾಂಕ)) |

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ :ಸಾ.ಸ.4:41 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಯ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ :ಸಾ.ಸ.4:42(2023)

ವಿಷಯ: ಸ್ವಾಯತ್ತ ಕಾಲೇಜುಗಳ ಸ್ವಾಯತ್ತತೆಯನ್ನು ಮುಂದುವರಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ನಿಯಮಾನುಸಾರವಾಗಿ Joint Expert Committee ಯನ್ನು ರಚಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.4:43(2023)

ವಿಷಯ: ಮಾನವಪ್ರಜ್ಞೆ ಮತ್ತು ಯೋಗವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿಗೆ ಅಗತ್ಯವಿರುವ 7.5 KVA UPS with Batteries ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 20.06.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ :ಸಾ.ಸ.4:44(2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ / ಹೊರಗುತ್ತಿಗೆ ನೆಲೆಯಲ್ಲಿ ಬೋಧಕೇತರ ಸಿಬ್ಬಂದಿಗಳನ್ನು ಬಳಸಿಕೊಂಡಿರುವ ಕ್ರಮಕ್ಕೆ ಸರಕಾರದಿಂದ ಸ್ವೀಕೃತವಾಗಿರುವ ಪತ್ರದ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ :ಸಾ.ಸ.4:45(2023)

ವಿಷಯ: ಡಾ. ಅಣ್ಣಯ್ಯ ರಮೇಶ್, ಸಹಾಯಕ ಪ್ರಾಧ್ಯಾಪಕರು, ಅನ್ವಯಿಕ ಸಸ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು ಸರ್ಕಾರಕ್ಕೆ ಸಲ್ಲಿಸಿರುವ ದೂರಿನ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿ ಪ್ರಸ್ತಾವನೆಯಲ್ಲಿ ದೂರುದಾರರು ದೂರು ಸಲ್ಲಿಸಿರುವ ವ್ಯಕ್ತಿಗಳ ಮೇಲಿನ ಆಪಾದನೆಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಿ, ಸದರಿ ದಾಖಲೆಗಳೊಂದಿಗಿನ ವಿವರಣೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ :ಸಾ.ಸ.4:46(2023)

ವಿಷಯ: ದಿನಾಂಕ 04.06.2018ರ ಸಿಂಡಿಕೇಟು ನಿರ್ಣಯದನುಸಾರ ಖಾಯಂಮಾತಿಗೊಂಡಿರುವ ವಾಹನ ಚಾಲಕರುಗಳ ನೇಮಕಾತಿಗೆ ಸರಕಾರದಿಂದ ಬಂದಿರುವ ಪತ್ರದ ಬಗ್ಗೆ.

ನಿರ್ಣಯ: ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಇತರ ವಿಷಯಗಳು**

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಪಾವತಿಗೆ ಬಾಕಿಯಿರುವ ಮೊತ್ತವನ್ನು ಶೀಘ್ರದಲ್ಲಿ ಪಾವತಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. ಕುಲಸಚಿವರು (ಪರೀಕ್ಷಾಂಗ) ಇವರು, ದಿನಾಂಕ 25.05.2023ರಂದು ನಡೆದ ಸಿಂಡಿಕೇಟು ಸಭೆಯಲ್ಲಿ ಕಾರ್ಯಸೂಚಿ ಸಂಖ್ಯೆ ಪರೀಕ್ಷಾಂಗ: ಸಾ.ಸ.3:27 (2023) ರ ನಿರ್ಣಯದಲ್ಲಿ *"Laptop ಬದಲು Desktop ಗಳನ್ನು ಮರು ಟೆಂಡರು ಪ್ರಕ್ರಿಯೆ ಮೂಲಕ ಖರೀದಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು."* ಈ ನಿರ್ಣಯದ ಬಗ್ಗೆ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದೆ ಮಂಡಿಸಿದರು.

   ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳು UUCMS ಮೂಲಕ ನಡೆಯುತ್ತಿದ್ದು, ಸದರಿ ಪರೀಕ್ಷೆಗಳ ಮೌಲ್ಯಮಾಪನದ ಕಾರ್ಯವು ವಿವಿಧ ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಯುತ್ತಿರುವುದರಿಂದ ಸದರಿ ಕೇಂದ್ರಗಳಲ್ಲಿ ಲ್ಯಾಪ್‌ಟಾಪ್‌ನ ಅವಶ್ಯಕತೆಯು ತೀರಾ ಅಗತ್ಯವಾಗಿರುತ್ತದೆ. ಆದುದರಿಂದ ವಿಶ್ವವಿದ್ಯಾನಿಲಯದ ಪರೀಕ್ಷಾ ಮೌಲ್ಯಮಾಪನ ಕಾರ್ಯಗಳಿಗೆ ಮೌಲ್ಯಮಾಪನ ಕಾರ್ಯಕ್ಕೆ ಅಗತ್ಯವಿರುವ ಲ್ಯಾಪ್ ಟಾಪ್‌ಗಳನ್ನು ಖರೀದಿಸಲು ಸಿಂಡಿಕೇಟು ಸಭೆಯ ಅನುಮೋದನೆಗಾಗಿ ಪ್ರಸ್ತಾವನೆ ಮಂಡಿಸಿದರು.

   ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪರೀಕ್ಷಾ ಮೌಲ್ಯಮಾಪನ ಕಾರ್ಯಗಳಿಗೆ ಲ್ಯಾಪ್ ಟಾಪ್‌ಗಳ ಅಗತ್ಯತೆ ಇರುವುದನ್ನು ಸಿಂಡಿಕೇಟು ಸಭೆಯು ಮನಗಂಡು, ಪರೀಕ್ಷಾ ಮೌಲ್ಯಮಾಪನ ಕಾರ್ಯಗಳಿಗೆ ಮಾತ್ರ ಅಗತ್ಯವಿರುವಷ್ಟು ಲ್ಯಾಪ್ ಟಾಪ್‌ಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಿತು.

3. ಮಂಗಳೂರು ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ಅಂಕಪಟ್ಟಿಗಳ ನೈಜತೆ ಪರಿಶೀಲನಾ ಶುಲ್ಕವನ್ನು ರೂ.500.00 (ರೂಪಾಯಿ ಐದು ನೂರು ಮಾತ್ರ) (Per Set) ಕ್ಕೆ ನಿಗದಿಪಡಿಸಲಾಗಿರುತ್ತದೆ. ಸದರಿ ವಿಷಯವನ್ನು ಶುಲ್ಕ ಪರಿಷ್ಕರಣಾ ಸಮಿತಿಯ ಶಿಫಾರಸ್ಸುಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

4. ವಿಶ್ವವಿದ್ಯಾನಿಲಯದ ಆಡಳಿತ ಕಾರ್ಯಗಳಲ್ಲಿ ವಿಶೇಷಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಲ್ಲಿ ಕುಲಸಚಿವರ ಕಛೇರಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷಾಧಿಕಾರಿಯನ್ನು ಹೊರತುಪಡಿಸಿ, ಇತರ ವಿಶೇಷಾಧಿಕಾರಿಗಳಲ್ಲಿ ಶೇಕಡಾ 50 ರಷ್ಟು ಬೋಧಕ ಸಿಬ್ಬಂದಿಗಳನ್ನು ಒಂದು ವಾರದೊಳಗಾಗಿ ಬಿಡುಗಡೆಗೊಳಿಸಬೇಕೆಂಬುದಾಗಿ ಹಾಗೂ ಉಳಿದ ಎಲ್ಲಾ ಬೋಧಕ ಸಿಬ್ಬಂದಿಗಳನ್ನು ಮುಂದಿನ ಸ್ನಾತಕೋತ್ತರ ಕಾರ್ಯಕ್ರಮಗಳ ಶೈಕ್ಷಣಿಕ ವೇಳಾಪಟ್ಟಿಗಳು ಆರಂಭವಾಗುವ ಮೊದಲೇ ಬಿಡುಗಡೆಗೊಳಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

5. ಸಿಂಡಿಕೇಟು ಸದಸ್ಯರಾಗಿರುವ ಡಾ. ಕೆ. ಸಿ. ಮಹದೇಶ ಇವರನ್ನು ಸಿಂಡಿಕೇಟು ಸದಸ್ಯರ ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |